ಸೇತುವೆಯಾಗಿ ಔಷಧಿ ಅಂಗಡಿಯೂ, ಆಪರೇಶನ್ ಥಿಯೇಟರ್, ಸ್ಕ್ಯಾನಿಂಗ್ ಸೆಂಟರ್, ರಕ್ತ ತಪಾಸಣೆ, ಅರವಳಿಕೆ ಮದ್ದು, ಗುಳಗಿ, ಸಲಾಯಿನ್... ಒಂದೆರಡಲ್ಲ ಅಳಿಯನಿಗಾಗಿ ಅವನ ಕೈಕಾಲುಗಳು ಸೋತು ಹೋಗಿದ್ದವು. ಬೀಗರಲ್ಲಿ ಅನೇಕರು ಶಾರದೆಯ ಬಗ್ಗೆ ಕೊಂಕು ಮಾತಾಡಿದವರೇ ಹೆಚ್ಚು. ಆ ಎಲ್ಲ ಮಾತುಗಳ ಆಚೆಗೆ ಕಳಂಕ ಹೊತ್ತ ಜೀವವೊಂದು ತನ್ನೆಲ್ಲ ಆಸೆ ಆಕಾಂಕ್ಷೆಗಳ ಬತ್ತಿ ಹೊಸೆದು ಬೆಂಕಿಯೂ ಎಣ್ಣೆಯೂ ಸಿಗಲಾರದೆ ಜೀವ ಸವೆಸುವ ಕಲ್ಪನೆ ಅವನನ್ನು ಜೀವ ಹಿಂಡುತ್ತಿತ್ತು. ಶಾರಿಯ ಮುಖ ನೋಡಿದವನೇ ಬಿಕ್ಕಿ ಅಳಬೇಕೆಂದಿದ್ದನೋ ಏನೋ. ಕಣ್ಣು ಕಿವಚಿಕೊಂಡು ಅಲ್ಲೆ ತಡೆದು ನಿಲ್ಲಿಸಿದ ಕಣ್ಣೀರ ಹೊಳೆಯನ್ನು.

ಜೊತೆಗಿದ್ದ ಗೆಳೆಯನ ತಲೆಗೆ ಪೆಟ್ಟಾಗಿ ಅವನು ಅಲ್ಲೇ ಸತ್ತು ಹೋದರೂ ಅಳಿಯ ಜೀವಂತ ಉಳಿದಿರುವುದಕ್ಕೆ ಶಾರಿಯ ಹಣೆಬರಹ ಗಟ್ಟಿ ಎಂದರು ಕೆಲವರು. ಊನಾಗಿರುವ ಹುಡುಗ ಹುಷಾರ ಆಗತಾನೋ ಇಲ್ಲವೋ... ಆದರೂ ಮತ್ತ ಮೊದಲಿನಂಗ ನಡದಾಡತಾನೋ ಇಲ್ಲೋ... ಕೈಗೆ ಕಸುವು ಬರದಿದ್ದರ ಹೆಂಗ ಶಾರದಾಳ ಬಾಳೇವು... ಆಕೆ ದುಡಿದು ತಂದು ಹಾಕಿ, ತಿನಿಸಿ ಕೈಬಾಯಿ ತೊಳಸೋದಲ್ಲದೆ ಕುಂಡೀನೂ ತೊಳಸಬೇಕಾಗತದಲ್ಲ... ಇನ್ನ ಲಗ್ನದ ಮಾತು ಮರತ ಬಿಡೋದ ಚಲೋ ಅಂದರು ಕೆಲವರು. ಹೀಗೆ ಕೂಡಿದ್ದ ಮಂದಿ ಒಬ್ಬೊಬ್ಬರು ಒಂದೊಂದು ಮಾತಾಡಿ ಮತ್ತಷ್ಟು ಗೋಜಲನ್ನು ಹುಟ್ಟುಹಾಕಿ ಹೊರನಡೆದರು.

ಬಸವಜಯಂತಿ ಕಳೆದು ಮಗನ ಮದುವೆ ಮಾಡುವುದೆಂದು ತೀರ್ಮಾನಿಸಿದ್ದ ಅವಳ ತಂದೆಗೆ ಇದು ನುಂಗಲಾರದ ತುತ್ತಾಗಿತ್ತು. ಆವಾಗ ಆವಾಗ ಬಂದು ಹೋಗುತ್ತಿದ್ದ ಸೊಸೆಯು ಮಗನ ಮೂಲಕವೇ ಅವಸರದ ಚಿಟುಕುಮುಳ್ಳಾಡಿಸುತ್ತಿದ್ದಳು. ಹಾ ಹೋ ಎನ್ನುವುದರೊಳಗೆ ದವನದ ಹುಣ್ಣಿಮೆ ಬಂದದ್ದೆ ತಡ ಸೊಸೆಯ ಕಡೆಯ ಬೀಗರು ಮದುವೆಯ ಮಾತುಕತೆ ಶುರು ಮಾಡುತ್ತಿದ್ದಂತೆ ಶಾರದೆಯ ಕಳಾಹೀನ ಕಣ್ಣುಗಳು ಮುಂದೇನು ಎಂದು ಕೇಳತೊಡಗಿದ್ದವು. ಎರಡಲಗಿನ ಕತ್ತಿಯ ನಡುವೆ ಕೂತಿದ್ದ ಅಪ್ಪನ ಸಂಕಟ ಅರ್ಥಮಾಡಿಕೊಳ್ಳುವಷ್ಟು ತನ್ನ ತಮ್ಮ ಬೆಂದಿಲ್ಲ ಎಂಬುದೂ ಮತ್ತು ಅವನ ಪ್ರೇಮದ ಬಾಬತ್ತಿನಲ್ಲಿ ಇದು ಯಾವುದೂ ಬೇಡವಾಗಿದ್ದನ್ನು ವರ್ತನೆಯಲ್ಲಿಯೇ ಊಹಿಸಬಹುದಾಗಿತ್ತು.

'ಆದದ್ದು ಆಗಿ ಹೋತು ಕಾಣಾಕಾಣ ಮಗಳನ್ನು ಬೆಂಕಿಗೆ ಹಾಕಿ ಕೈ ಸುಟ್ಟುಕೊಳ್ಳೋದು ಚಲೋ ಕಾಣಸೂದುಲ್ಲ... ಶಾರಿಗೆ ಬ್ಯಾರೆ ಹುಡುಗನ್ನ ನೋಡಿ ಮುಂದಲ ವರ್ಷ ಲಗ್ಗಣಾ ಮಾಡಿದ್ರಾತು. ಈಗ ಇಂವಂದೊಂದು ಉಪದ್ರ ಹೆಚ್ಚಾಗೇತಿ... ಬೀಗರು ಏನಂತಾರು?... ಅದನ್ನಾರ ಕೇಳಿದೇನೂ, ಎರಡೂ ಕಾರೇವು ಈ ಸಲ ಮುಗದಿದ್ದರ ಪರಲು ಹರದಬಿಡತಿತ್ತು. ಅವರದ್ದ ಅವರು ಮಾಡಕೊಂಡ ಹೊಂಟರ ನಮ್ಮದೇನೈತಿ! ಮಾಡಿ ಹಾಕಿದ್ದನ್ನ ತಿಂದ ಆದಷ್ಟ ಹ್ವಾರೆ ಮಾಡಕೊಂಡು ಹೊತ್ತುಗಳೆಯೋದು' ಅವ್ವ ಮಗನ ಪರವಾಗಿ ವಕಾಲತ್ತು ವಹಿಸಿದ್ದಳು.

'ಬೀಗರೇನಂತಾರ... ನಮ್ಮ ಮನಿ ಮಗಳಿಗೆ ತ್ರಾಸಾಕ್ಕೈತಿ. ಅಂವ ಅಲ್ಲಾಂದ್ರೂ ಮತ್ತೆಲ್ಲ್ಯಾರ ಹುಡುಗ ಸಿಕ್ಕ ಸಿಗತಾನು. ಆಕೀ ಹಣೆಮ್ಯಾಲ ಬರದದ್ದು ಆಕ್ಕೈತಿ ಬಿಡು...'

'ಅಂವ ಉಜಳಣೀ ಆಗೂದಿಲ್ಲ ಅಣಸತೈತ್ಯಾ?'

'ಈಗ ಹೆಂಗ ಹೇಳೂದು, ಡಾಕ್ಟರ್ರೂ ಪೂರಾ ಆರಾಮ ಆಕ್ಕಾನ ಅನ್ನೂದ ಖಾತ್ರಿ ಹೇಳಲೊಲ್ಲರು.'